
# ಸ್ವಾಭಿಮಾನಕ್ಕಿಲ್ಲ ಸೋಲು

## ಜಾತಿ ದೌರ್ಜನ್ಯಕ್ಕೆ ಕೊನೆ



RHR-100
CLIC-SOPHEA
Community Health Library and Information Centre (CLIC) SOPHEA-SOCHARA Koramangala Bangalore-34.

lawyering for change

ಪರ್ಯಾಯ ಕಾನೂನು ವೇದಿಕೆಯು ಮಾನವ ಹಕ್ಕುಗಳ ರಕ್ಷಣೆಗಾಗಿ ಶ್ರಮಿಸುವ ವಕೀಲರ ಸಮೂಹವಾಗಿದೆ. ಪರ್ಯಾಯ ಕಾನೂನು ವೇದಿಕೆಯು ದಾವೆ ನಡೆಸುವ ಹಾಗೂ ಸಂಶೋಧನೆಯ ಮೂಲಕ ಸಾಮಾಜಿಕ ಮತ್ತು ಆರ್ಥಿಕ ನ್ಯಾಯ ಸಮಸ್ಯೆಗಳಿಗೆ ಪ್ರತಿಕ್ರಿಯಿಸುವ ಭಿತ್ತಿಪತ್ರಗಳನ್ನು ಹಾಗು ಕಿರ ಪುಸ್ತಿಕೆಯನ್ನು ಹೊಂದಿದೆ.

ಪ್ರಕಟಣೆ: *April 14, 2024* ರಂದು
ಕಲೆ (ಇಲ್ಲಸ್ಟ್ರೇಷನ್): ವೈಷ್ಣವಿ ಗಿರಿಧರನ್ ಮತ್ತು ಮಣಿವರ್ಮ
ಸಂಭಾಷಣೆ ಬರಹ ಮತ್ತು ಸಂಕಲನ ನೆನಕೆಗಳು: ಕಲ್ಪನಾ ಚಕ್ರವರ್ತಿ ಮತ್ತು ಚಿತ್ರಾ ಐಯ್ಯರ್
ವಿಶೇಷ ಧನ್ಯವಾದಗಳು: ದು. ಸರಸ್ವತಿ ಮತ್ತು ಶಿವಮಣಿದನ್ ಎಸ್. ಶಿವಮಣಿದನ್ ಅವರ ಸಲಹೆ , ಪ್ರೋತ್ಸಾಹ ಇಲ್ಲದೆ ಈ ಪುಸ್ತಕ ತರಲು ಸಾಧ್ಯವಾಗುತ್ತಿರಲಿಲ್ಲ.

ನಿಮ್ಮ ಪ್ರತಿಕ್ರಿಯೆಗಳನ್ನು ಈ ವಿಳಾಸಕ್ಕೆ ಕಳುಹಿಸಿ: *contact@altlawforum.org*

---

ಪರಿಶಿಷ್ಟ ಜಾತಿಗಳು (ಎಸ್.ಸಿ) ಮತ್ತು ಪರಿಶಿಷ್ಟ ಪಂಗಡಗಳ (ಎಸ್.ಟಿ) ದೌರ್ಜನ್ಯ (ತಡೆ) ಕಾಯಿದೆಯು ಪುರಾತನ ಭಾರತೀಯ ಜಾತಿ ವ್ಯವಸ್ಥೆಯ ವಿರುದ್ಧ ಹೋರಾಡುವ ಗುರಿಯನ್ನು ಹೊಂದಿದೆ. 25 ಸೆಕ್ಷನ್ ಗಳು ಸೇರಿದಂತೆ ಹಲವು ನಿಯಮಗಳನ್ನು ಹೊಂದಿರುವ ಈ ಕಾಯಿದೆಯು. ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಸಮುದಾಯಗಳ ವ್ಯಕ್ತಿಗಳ ಮೇಲೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರದ ವ್ಯಕ್ತಿಗಳು ನಡೆಸುವ 42 ತಾರತಮ್ಯದ ನಡವಳಿಕೆಗಳನ್ನು ಪಟ್ಟಿಮಾಡಿ ವ್ಯಾಖ್ಯಾನಿಸಿದೆ. ಈ ಕಾಯಿದೆಯು ಅವುಗಳನ್ನು ಅಪರಾಧಗಳು ಎಂದು ಘೋಷಿಸಿ. ಸದರಿ ಅಪರಾಧಗಳಿಗೆ 6 ತಿಂಗಳ ಜೈಲುಶಿಕ್ಷೆಯಿಂದ ಮರಣ ದಂಡನೆಯವರೆಗೂ ಶಿಕ್ಷೆಯನ್ನು ಸೂಚಿಸಿದೆ. ಮುಂದುವರೆದು. ಈ ಕಾಯಿದೆಯಡಿಯಲ್ಲಿ ನಡೆಯುವ ಅಪರಾಧಗಳ ತನಿಖೆಯನ್ನು ಉಪ ಪೋಲೀಸ್ ಅಧೀಕ್ಷಕರು (ಡಿವೈಎಸ್.ಪಿ) ನಡೆಸಬೇಕೆಂದು ವಿವರಿಸಿರುವ ಕಾಯಿದೆಯು. ಜಾತಿ ದೌರ್ಜನ್ಯ ಪ್ರಕರಣಗಳ ತನಿಖೆಯನ್ನು ಕೂಲಂಕುಷವಾಗಿ. ಕ್ಷಿಪ್ರಗತಿಯಲ್ಲಿ ಹಾಗೂ ನ್ಯಾಯಯುತವಾಗಿ ನಡೆಸುವ ಸಲುವಾಗಿ ಡಿವೈಎಸ್ಪಿ ಹಾಗೂ ಅದಕ್ಕೂ ಮೇಲಿನ ಹಂತದ ಅಧಿಕಾರಿಗಳು ಮಾತ್ರ ಕಡ್ಡಾಯವಾಗಿ ನಡೆಸಬೇಕೆಂದು ವಿಧಿಸಿದೆ.

ಜಾತಿ ದೌರ್ಜನ್ಯದ ಸಂತ್ರಸ್ಥರ ಹಕ್ಕುಗಳನ್ನು ಈ ಕಾಯಿದೆಯು ಮೂರು ವಿಶಿಷ್ಟ ರೀತಿಯಲ್ಲಿ ರಕ್ಷಿಸುತ್ತದೆ:

- ಮೊದಲಿಗೆ. ಇದು ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳುವ ಮೂಲಕ ಸಂತ್ರಸ್ಥರ ಹಕ್ಕುಗಳನ್ನು ರಕ್ಷಿಸುತ್ತದೆ. ಇದು ನಿರ್ದಿಷ್ಟ ಪ್ರದೇಶಗಳನ್ನು ದೌರ್ಜನ್ಯ-ಪೀಡಿತ ಪ್ರದೇಶಗಳೆಂದು ಘೋಷಿಸುವ ಮೂಲಕ ಹಾಗೂ ಸದರಿ ಪ್ರದೇಶಗಳಲ್ಲಿ ಕಡ್ಡಾಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳುವ ಮೂಲಕ
- ಎರಡನೆಯದಾಗಿ. ನ್ಯಾಯಾಲಯದ ಕಾರ್ಯಕಲಾಪಗಳು ನಡೆಯುವಾಗ. ಎಲ್ಲಾ ಸಂದರ್ಭಗಳಲ್ಲಿಯೂ ಸಂತ್ರಸ್ಥರಿಗೆ ಪೊಲೀಸ್ ರಕ್ಷಣೆಯನ್ನು ನೀಡುವ ಮೂಲಕ ಮತ್ತು
- ಮೂರನೆಯದಾಗಿ. ನಗದು ಅಥವಾ ಇನ್ನಿತರ ಪರಿಹಾರ ಕ್ರಮದ ಮೂಲಕ. ಸಂತ್ರಸ್ಥರಿಗೆ ಪುನರ್ವಸತಿಯನ್ನು ಖಾತ್ರಿಪಡಿಸುವ ಮೂಲಕ ಸಂತ್ರಸ್ಥರ ಹಕ್ಕುಗಳನ್ನು ರಕ್ಷಿಸುತ್ತದೆ.


ಆದಾಗ್ಯೂ. ಈ ಉತ್ತಮ ಕಾಯಿದೆಯ ಪರಿಣಾಮದ ಕುರಿತು ಕೂಲಂಕುಷವಾಗಿ ನೋಡಿದಾಗ. ಅದರ ಅನುಷ್ಠಾನ ಇನ್ನೂ ಪಾತಾಳದಲ್ಲಿ ಉಳಿದಿರುವುದು ಕಾಣುತ್ತದೆ. ರಾಷ್ಟ್ರೀಯ ಮಟ್ಟದ ದಲಿತ ಸಂಘಟನೆಗಳು ನಡೆಸಿದ ಅಧ್ಯಯನದ ಪ್ರಕಾರ. 1991 ರಿಂದ 2021 ರ ಅವಧಿಯ ನಡುವೆ 15 ರಾಜ್ಯಗಳಲ್ಲಿ ಪರಿಶಿಷ್ಟ ಜಾತಿ ಸಮುದಾಯಗಳ ಮೇಲೆ ನಡೆದ ಅಪರಾಧಗಳ ಸಂಖ್ಯೆಯಲ್ಲಿ ಶೇ.177.6% ಹಾಗೂ ಪರಿಶಿಷ್ಟ ಪಂಗಡ ಸಮುದಾಯಗಳ ವಿರುದ್ಧದ ಅಪರಾಧಗಳ ಸಂಖ್ಯೆಯಲ್ಲಿ ಶೇ. 111.2% ಏರಿಕೆ ಕಂಡಿದೆ. ಇದೇ ರೀತಿ. 2023 ರಲ್ಲಿ ಕರ್ನಾಟಕ ಸರ್ಕಾರವು ಈ ಕಾಯಿದೆಯ ಅನುಷ್ಠಾನವನ್ನು ಪರಿಶೀಲಿಸಲು ರಚಿಸಿದ ಉನ್ನತ ಮಟ್ಟದ ಸಮಿತಿಯ ಪ್ರಕಾರ. ಎಸ್ ಸಿ. ಎಸ್ ಟಿ ಸಮುದಾಯಗಳ ವಿರುದ್ಧ ನಡೆಯುವ ಪ್ರಕರಣಗಳಲ್ಲಿ ಆಗುವ ಶಿಕ್ಷೆಯ ಪ್ರಮಾಣ ಕನಿಷ್ಟ ಶೇ. 3.44% ರಷ್ಟಿದೆ. ಇನ್ನು 1.100 ಪ್ರಕರಣಗಳಲ್ಲಿ, ಮೊಕದ್ದಮೆ ದಾಖಲಾಗಿ ಎರಡು ತಿಂಗಳುಗಳಾದರೂ ಸಹ ಚಾರ್ಜಶೀಟ್ ಹಾಕಿರುವುದಿಲ್ಲ. ಹಲವಾರು ಪ್ರಕರಣಗಳಲ್ಲಿ ಮೇಲ್ಜಾತಿ ಸಮುದಾಯಗಳಿಂದ ಸೇಡಿನ ಭಯದ ಕಾರಣ. ಕಾನೂನಿನ ಬಗ್ಗೆ ಅರಿವು ಇಲ್ಲದಿರುವುದು ಹಾಗೂ ಪೊಲೀಸರ ನಿಷ್ಕ್ರಿಯತೆಯ ಕಾರಣ, ಈ ಸಮುದಾಯಗಳ ಮೇಲೆ ನಡೆಯುವ ದೌರ್ಜನ್ಯಗಳು ವರದಿಯಾಗುವುದೇ ಇಲ್ಲವೆಂದು 2021 ರಲ್ಲಿ ಭಾರತದ ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ.


ಈ ಮೇಲಿನ ಕಾರಣಗಳಿಗೆ ಸಂಬಂಧಿಸಿದಂತೆ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ ವಿರುದ್ಧ ದೌರ್ಜನ್ಯ (ತಡೆ) ಕಾಯಿದೆಯ ಕುರಿತು ಜಾಗೃತಿ ಮೂಡಿಸಲು ಹಾಗೂ ಅದರ ಕುರಿತು ಕಾನೂನಿನ ಅರಿವನ್ನು ಹೆಚ್ಚಿಸಲು ಪರ್ಯಾಯ ಕಾನೂನು ವೇದಿಕೆಯು ಹಲವು ಯೋಜನೆಗಳನ್ನು ಕೈಗೊಂಡಿದೆ. ಸಾಮಾಜಿಕ ಕಾರ್ಯಕರ್ತರು ಹಾಗೂ ಎಸ್.ಸಿ. ಎಸ್.ಟಿ ಸಮುದಾಯದ ಜನರೊಂದಿಗೆ ಕಾನೂನು ಅರಿವು ಶಿಬಿರಗಳು ಆಯೋಜಿಸುತ್ತಿದ್ದೇವೆ. ಇದರ ಜೊತೆಗೆ, ಈ ಕಾಯಿದೆಯನ್ನು ಸರಳವಾಗಿ ಅರ್ಥಮಾಡಿಸಲು ಭಿತ್ತಿಪತ್ರಗಳನ್ನು ತಯಾರಿಸಿದ್ದೇವೆ .

ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯದ ಜನರು ಕಾನೂನಿನಲ್ಲಿ ವಿಶ್ವಾಸವಿಡುವಂತೆ ಪ್ರೇರೇಪಿಸಲು. ಕಠಿಣ ಪರಿಸ್ಥಿತಯಲ್ಲಿ ಅವರಿಗೆ ನೆರವಾಗಲು ಕಾಲ್ಪನಿಕ ಕಥೆಯುಳ್ಳ ಈ ಕಿರುಪುಸ್ತಕವನ್ನು ತಂದಿದ್ದೇವೆ. ಈ ಕಾಯಿದೆಯ ಬಗ್ಗೆ ಈ ಸಮುದಾಯಗಳ ಜನರೊಂದಿಗೆ , ಪೊಲೀಸರು ಹಾಗೂ ಸರ್ಕಾರಿ ವಕೀಲರೊಂದಿಗೆ ಕೆಲಸ ಮಾಡಿ. ನಾವು ಕಲಿತಿದ್ದೇನೆಂದರೆ - ಈ ಕಾಯಿದೆ ಅಡಿಯಲ್ಲಿ ಜನರು ನ್ಯಾಯವನ್ನು ಪಡೆಯುವುದು ಸವಾಲಾಗಿದೆ ಎಂದು. ಈ ಕಥೆಯ ಗುರಿ ಕಾನೂನಿನ ಕುರಿತು ಜಾಗೃತಿಯನ್ನು ಮೂಡಿಸುವುದಾಗಿದೆ. ಈ ಕಥೆಯು ಮಾದರಿ ಸನ್ನಿವೇಷದ ನಿರೂಪಣೆಯಾಗಿದೆ. ಇದು ವಾಸ್ತವ ಅಲ್ಲ. ನಿಜ. ಆದರೂ. ನಮ್ಮ ಓದುಗರು ಇದರಿಂದ ಸ್ಪೂರ್ತಿ ಪಡೆದು. ಜಾತಿ ದೌರ್ಜನ್ಯದಂತಹ ಪ್ರಕರಣಗಳನ [illegible] ದೆ ಎಂಬ ಭರವಸೆ ಇದೆ. ಅತ್ಯಂತ ಪ್ರಮುಖವಾಗಿ. ನಮ್ಮ ಓದುಗರು ಜಾತಿ ತಾರತಮ್ಯದ [illegible] ಜೀವನದ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಬೀರುತ್ತದೆ ಎಂದು ಅರಿತುಕೊಳ್ಳುತ್ತಾರ [illegible]





ಹಳ್ಳಿಯ ನಕ್ಷೆ: ನೆಲಬಾಳು ಗ್ರಾಮ


ಸಿಟ್ಟಿನಿಂದ ಬುಸುಗುಡುತ್ತಿರುವ ಶಿವರಾಮಯ್ಯ ಕೆರೆಯ ಬಳಿ ತನ್ನ ಹಿಂಬಾಲಕರೊಂದಿಗೆ ಮಾತನಾಡುತ್ತಿದ್ದಾನೆ.
ಈ ವರ್ಷದ ಟೆಂಡರ್ ನೋಟಿಫಿಕೇಷನ್ ಬಂದಿದೆ. ಕಲೆಕ್ಟರ್ ಎಲ್ಲರ ಅರ್ಜಿಗಳನ್ನು ಸ್ವೀಕರಿಸುತ್ತಾರೆ. ಸರ್ಕಾರಕ್ಕೆ ತಲೆ ಇಲ್ಲವಾ? ಆ ಕಳ್ಳ-ಸುಳ್ಳ ಜಾತಿಗಳವರನ್ನೂ ಸೇರಿಸ್ಕೊತಿದ್ದಾರಂತೆ. ಒಂದು ಗೆದ್ದಲು ಹುಳ ಎದ್ದರೆ ಇಡೀ ಗೋಡೆ ಎದ್ದು ಬಿಡತ್ತೆ. ನಾವು ಕೈ ಕಟ್ಕೊಂಡು ನೋಡ್ಕೊಂಡು ಸುಮ್ನೆ ಇರ್ಬೇಕ?
ಆ ಅಂಜನಪ್ಪ ಅರ್ಜಿ ಕೊಟ್ಟಿದ್ದಾನಾ? ಅವನು ತುಂಬ ಚಿಗುರುಕೊಂಡಿದ್ದಾನೆ.
ಹೌದು ಬುದ್ಧಿ. ಹಂಗಂತ ಅಂತ ಯಾರೋ ಹೇಳಿದ್ರು. ಈ ಸಲ ಟೆಂಡರ್ ಅವನ್ಗೆ ಆಗ್ಬೋದು ಅಂತನೂ ಹೇಳ್ತಿದ್ದಾರೆ. ನಿಮ್ಮ್ಯಾಕ್ ಚಿಂತೆ? ನಾವೇನ್ ಸುಮ್ನೆ ಬಿಟ್ಟಬಿಡ್ತೀವಾ? ಅದೇನ್ ರಾಮೋತ್ಸವನ ಅಣ್ಣಮ್ಮನ್ ತೇರಾ ನೋಡ್ಕೊಂಡ್ ಕೂತ್ಕೊಳೋಕ್ಕೆ? ಹುಂಜ, ಹುಂಜಾದ್ ಪಂದ್ಯ. ಬಿಟ್ಟೇವ?



ಅಂಜನಪ್ಪ ಸರೋಜ ಇಡೀ ದಿನ ಊರೆಲ್ಲಾ ಸುತ್ತಿ ಮೀನು ಮಾರಿ ಸುಸ್ತಾಗಿ ಸಂಜೆ ಮನೆಗೆ ಮರಳುತ್ತಾರೆ.
ನನಗೆ ದಿಗಿಲಾಗುತ್ತಿದೆ. ಇದೆಲ್ಲ ನಿಮಗ್ಯಾಕೆ ಬೇಕು? ಜಾತಿಯವರನ್ನ ಬೆಳೆಯೋಕೆ ಬಿಡ್ತಾರಾ ಅವರು? ಆ ಜಯಮ್ಮನ ಗಂಡ ಟೀ ಅಂಗಡಿ ಹಾಕ್ಕೊಂಡಿದಕ್ಕೆ ಅವರ ಸಂಸಾರನಾ ಬೀದಿಗೆ ತಂದಿ ನಿಲ್ಸಿದ್ದು ಮಾರ್ತೋಯಿತಾ ನಿನಗೆ?
ಟೆಂಡರ್ ಕರೆಯೋದು ಸರ್ಕಾರದ ನಿಯಮ. ಯಾವ ಜಾತಿ ಜನ ಬೇಕಾದ್ರೂ ಅರ್ಜಿ ಹಾಕಬಹುದು. ಮೇಲ್ಜಾತಿಯವರ ಇಷ್ಟ ಕಷ್ಟ ಯಾರ್ ಕೇಳ್ತಾರೆ? ಈ ಸರ್ತಿ ಟೆಂಡರ್ ನಮಗೆ ಸಿಕ್ಕಿದ್ರೆ ನಾವು ಎಷ್ಟು ಸುಧಾರಿಸಿಕೊಳ್ಳಬಹುದು, ಯೋಚನೆ ಮಾಡಿದ್ದೀಯಾ?
ಇರಬಹುದು. ಆದ್ರೂ ನಾವು ಬಡವರು ಮತ್ತು ದಲಿತರು. ಬಲಾಢ್ಯರ ವಿರುದ್ಧ ಹೋರಾಡೋ ಶಕ್ತಿ ನಮಗೆ ಇದೆಯೇ? ನಮ್ಮ ಜಾತಿ ಜನಕ್ಕೆ ಯಾವತ್ತಾದ್ರೂ ಒಳ್ಳೆಯದು ಆಗಕ್ಕೆ ಬಿಟ್ಟಿದ್ದಾರಾ? ನಂಗ್ಯಾಕೋ ಭಯ ಅಂಜಿ.


ತಾಲೂಕ್ ಆಫೀಸ್ ನ ಕಾಂಪೌಂಡ್ ನಲ್ಲಿ ಅಂಜನಪ್ಪ ಸರ್ಕಾರಿ ಅಧಿಕಾರಿಯೊಂದಿಗೆ ಮಾತನಾಡುತ್ತಿದ್ದನ್ನು, ಶಿವರಾಮಯ್ಯನ ಸಹಚರನಾದ ನಿಂಗಪ್ಪ ನೋಡುತ್ತಾನೆ.
ನನ್ನ ಅರ್ಜಿ ತಗೊಂಡ್ಡಿದಕ್ಕೆ ಧನ್ಯವಾದಗಳು ಸರ್!
ಮೊದಲನೇ ಭಾರಿ ನಿಮ್ಮ ಸಮುದಾಯದಿಂದ ಅರ್ಜಿಯನ್ನು ಸ್ವೀಕರಿಸಿದ್ದೇವೆ. ನಿಮಗೆ ಒಳ್ಳೆಯದಾಗಲಿ.
ಏಯ್ ಏನ್ ಧಿಮಾಕು ನಿಂದು? ಊರಲ್ಲಿ ಸಾಹುಕಾರರು ಅಂತ ಇರುವಾಗ ನೀನ್ ಏನು ಅರ್ಜಿ ಹಾಕೋದು? ತೈಪ್ಪಿಗಿದ್ರೆ, ಸರಿ!
ನಿಂಗಪ್ಪ, ನಿಮಗೇನ್ರೀ ಬಾಧೆ? ಟೆಂಡರ್ ಯಾರಿಗೆ ಸಿಗಬೇಕು ಅಂತ ಅನ್ನೋದು ಸರ್ಕಾರ ನಿರ್ಧಾರ ಮಾಡುತ್ತೆ. ಆ ನಿಮ್ಮ ಸಾಹುಕಾರನಿಗೆ ಕೈ ಕಾಲ್ ನಡುಗುತಿದ್ದರೆ, ಅವರೇ ಅರ್ಜಿ ವಾಪಸ್ ತೆಗೆದುಕೊಳ್ಳಿ ಅಂತ ಹೇಳಿ. ನಾನು ಮುಂದೆ ಇಟ್ಟ ಹೆಜ್ಜೆ ಹಿಂದೆ ತೆಗೆಯವನು ಅಲ್ಲ!
ನೋಡು ಅಂಜನಪ್ಪ, ಯಾರ್ಯಾರು ಹೆಂಗಿರಬೇಕೋ, ಎಲ್ಲಿರಬೇಕೋ ಹಂಗೆ ಇದ್ದರೆ ಸರಿ. ತಲೆ ಗಟ್ಟಿಯಾಗಿದೆ ಅಂತ ಬಂಡೆಗೆ ಚಚ್ಚಿಕೊಂಡ್ರೆ, ನಿನ್ನ ಸಂಸಾರನೆ ಬೀದಿಗೆ ಬರುತ್ತೆ. ಅರ್ಜಿ ವಾಪಸ್ ತಗೊಂಡ್ರೆ ಸರಿ. ನಾವೇನು ಕೈಗೆ ಬಳೆ ತೊಟ್ಟಿಲ್ಲ.



ನನಗೇನೋ ದಿಗಿಲು, ಅಂಜಿ. ನಮಗೆ ಹೊಡೆದಾಡೋ ಶಕ್ತಿ ಇದ್ದೀಯ? ಅರ್ಜಿ ವಾಪಸ್ ತಗೊಂಡು ಬಿಡಿ. ಮಂಡಲ ಹಾವುಗಳ ಜೊತೆಗೆ ಸರಸ ಆಡೊಕ್ಕಾಗ್ತದ?
ಇದು ಒಳ್ಳೆ ಕಥೆ ಆಯಿತಲ್ಲ, ಸರು! ಸರ್ಕಾರ ಯಾರಿಗೆ ಬೇಕಾದ್ರೂ ಟೆಂಡರ್ ಕೊಡುತ್ತೆ. ಅದ್ಯಾವನೋ ಏನೋ ಮಾಡ್ತಾನಂತ ಹೆದ್ರುಕೋಳ್ಳೋಕೆ ಆಗುತ್ತಾ? ನಾವು ಈ ದೇಶದ್ ಪ್ರಜೆಗಳು. ಸಂವಿಧಾನ ಎಲ್ಲರಿಗೂ ಹಕ್ಕು ಕೊಟ್ಟಿದೆ.
ಸ್ವಲ್ಪ ಸಮಾಧಾನ ಮಾಡಿಕೊ. ದೇವಸ್ಥಾನಕ್ಕೆ ಹೋಗಿ, ಅಪ್ಪ ಒಳ್ಳೇದು ಮಾಡಪ್ಪ ಅಂತ ಕೇಳ್ಕೊಂಡು ಬಾ.
ತನ್ನ ಜಾತಿಯ ಜನರನ್ನು ದೇವಸ್ಥಾನದ ಒಳಗೆ ಬಿಡೋದಿಲ್ಲ ಎಂದು ಗೊತ್ತಿದ್ದ ಸರೋಜಾ , ಆಚೆ ನಿಂತುಕೊಂಡು ಪ್ರಾರ್ಥಿಸುತ್ತಾಳೆ.





ದೈವ ಮತವ ಮುಂದೆ ಮಾಡಿ
ನಮಗೆ ಮೋಸ ನಡೆದಿದೆ
ಅನ್ಯಾಯಕ್ಕೆ ಅನ್ಯಾಯ
ಮುಯ್ಯಿಗೆ ಮುಯ್ ಮುಂದಿದೆ.
- ಡಾ. ಸಿದ್ದಲಿಂಗಯ್ಯ ಅವರ ಕವಿತೆಯ ಆಯ್ದ ಭಾಗ
ಒಹೋ! ಶಿವರಾಮಯ್ಯ ನೇ ಎದುರು ಹಾಕಿಕೊಂಡು, ಅವರು ಕಟ್ಟಿಸಿರೋ ಗುಡಿಗೆ ಬಂದಿದ್ದೀಯಾ ಸರೋಜಾ? ನಿನ್ನ ಧೈರ್ಯ ಮೆಚ್ಚ್ಬೇಕು. ಎಲ್ಲಿ ನಿನ್ ಗಂಡಾ?
ಗುಡಿಯೊಳಗಿರೋ ನಮ್ಮಪ್ಪ ಊರು ಹೊರಗೆ ಇರುವ ನಮ್ಮಂತವರನ್ನು ಕಾಪಾಡಪ್ಪ.
ಅವನಿಗೆ ಏನು ಅಷ್ಟು ದುರಹಂಕಾರನಾ? ಈ ಕೆಳಜಾತಿ ಅವರಿಗೆ ಈ ಊರಲ್ಲಿ ಕೆಲಸ ಮಾಡಕ್ಕೆ ಬಿಟ್ಟಿದ್ದೇ ತಪ್ಪಾಯಿತು. ಶಿವರಾಮಯ್ಯ ಅಂದ್ರೆ ಏನಂದ್ಕೊಂಡಿದ್ದಾನೆ ಅವನು? ಅವನ ಜಾತಿ ಹುಳಗಳು ತುಟಿಕ್ ಪಿಟಿಕ್ ಅಂದ್ರೆ ಹೊಸ್ಕಾಕ್ಬಿಡ್ತೀವಿ.


ಟೀ ಅಂಗಡಿಯಲ್ಲಿ
ಟೀ ಹೇಳಿ ಅರ್ಧ ಗಂಟೆ ಆಯ್ತು. ಟೆಂಡರ್ ಅರ್ಜಿ ಹಾಕಿದ್ದೀನಿ ಅಂತ ಟೀ ಕಾಯ್ಸೋದ್ ಬಿಟ್ಟು ನನ್ನನ್ನೇ ಕಾಯಿಸ್ತಿದ್ದೀಯ?
ನಿಮ್ ಮಾತು ನೆಟ್ಟಗಿದ್ದರೆ ಸರಿ. ಇಲ್ಲಾಂದ್ರೆ ಟೀ ಅಲ್ಲ, ಒಂದು ತೊಟ್ಟು ನೀರ್ ಕೂಡ ಸಿಗಲ್ಲ!
ಟೀ ಅಂಗಡಿಯವನು ಹಾಗು ಅಲ್ಲಿರುವ ಇತರರು ಸೇರಿ ಅಂಜನಪ್ಪನಿಗೆ ಬೆದರಿಸುತ್ತಾರೆ.
ನಾವು ದಲಿತರು ಅಂತ ಎಷ್ಟು ಸಹಿಸಿಕೊಳ್ಳೋದು? ಈ ಸಲ ಟೆಂಡರ್ ನಮಗೆ ಸಿಗಲಿ. ನಿಮಗೆಲ್ಲ ದೆವ್ವ ಬಿಡಿಸ್ತೀನಿ ಹುಷಾರ್!
ಅಂಗಡಿಯಲ್ಲಿದ್ದ ಜನರು ಸೇರಿ ಅಂಜನಪ್ಪನ ಮೇಲೆ ಹಲ್ಲೆ ಮಾಡುತ್ತಾರೆ.


ನೋಡಿ ಅಂಜಿ! ಎಲ್ಲರೂ ನಮ್ಮನ್ನ ದ್ವೇಷ ಮಾಡ್ತಾರೆ. ನಿಮ್ಮ ಪರಿಸ್ಥಿತಿ ಏನಾಯಿತು ನೋಡಿ. ಬೇಡ ಬೇಡ ಅಂತ ಬಡ್ಕೊಂಡೇ.
ಅಂಜನಪ್ಪ! ಕೆರೆ ಹತ್ತಿರ ಬರಬೇಕೆಂದು ಶಿವರಾಮಯ್ಯ ಹೇಳಿ ಕಳಿಸಿದ್ದಾರೆ.
ಬರ್ತೀನಿ ತಗೋ...ಗುಡಿಯೊಳಗೆ ಬಿಡಲಿಲ್ಲ ಅಂದ್ರೆ, ಹೋಟಲ್ ಅಲ್ಲಿ ನೀರು ಕೊಡಲಿಲ್ಲ ಅಂದ್ರೆ, ನಾನೇನು ಭಯ ಬಿದ್ದು ಟೆಂಡರ್ ಅರ್ಜಿ ವಾಪಸ್ ತಗೋತೀನಿ ಅಂದ್ಕೋಬೇಡ.
ಹೋಗಬೇಡಿ ಅಂಜಿ, ನನಗ್ಯಾಕೋ ಭಯ ಆಗ್ತಿದೆ.
ಅಯ್ಯೋ ತಗೋ...ಅವನು ಊರು ಸಾಹುಕಾರ ಆದ್ರೆ ನಾನೇನು ಮಾಡೋಕ್ಕಾಗುತ್ತೆ? ನಡಿ ಮನೆಗೆ, ಊಟಕ್ಕೆ ಮುಂಚೆ ಮನೆಗೆ ಬರ್ತೀನಿ.


ಕತ್ತಲಾಗಿತ್ತು. ಸರೋಜಳಾ ಮನೆಯ ಬಾಗಿಲು ಬಡಿದ ಸದ್ದಾಯಿತು. ಪರಿಚಯ ಇಲ್ಲದ ಹೆಂಗಸು  ಬಂದು ನಿಂತಿದ್ದಾರೆ.
ಬೇಗ ಹೊರಡು. ನಿನ್ ಗಂಡ ಆ ಪಾಳುಬಿದ್ದ ಹೊಲದಲ್ಲಿ ಪ್ರಜ್ಞೆ ಕಳೆದುಕೊಂಡು ಬಿದ್ದಿದ್ದಾನೆ.
ಆ ರಮೇಶ, ನಿನ್ನ ಗಂಡನ್ನ ಶಿವರಾಮಯ್ಯನ ಹತ್ತಿರ ಕರೆದುಕೊಂಡು ಹೋದ. ಈಗ ನೋಡು ಏನಾಗಿದೆ.
ಮಾತನಾಡಿದ್ರೆ, ಆಗಬಾರದ್ದು ಆಗುತ್ತೆ. ಶಿವರಾಮಯ್ಯನನ್ನ ಎದುರು ಹಾಕಿಕೊಳ್ಳೋದು ಅಂದರೆ ಸುಮ್ಮನೆ ನಾ?
ಅಯ್ಯೋ ದೇವರೇ! ಏನಾಯ್ತು? ನಿಮಗೆ ಯಾರು ಏನು ಮಾಡಿದ್ರು?
ಅವರ ಜೀವ ಉಳಿಯಿತು . ಆದರೆ , ಅವರು ಮುಂಚೆಯಂತೆ ಓಡಾಡಲು ಸ್ವಲ್ಪ ಸಮಯ ಆಗುತ್ತದೆ.
ಸರೋಜ ತನ್ನ ಕುಟುಂಬದ ಭವಿಷ್ಯದ ಬಗ್ಗೆ ಯೋಚನೆ ಮಾಡುತ್ತಾ ಬಹಳ ಬೇಸರಗೊಂಡಳು.


ಕೆಲವು ದಿವಸಗಳ ನಂತರ, ಸರೋಜ ಮಗಳು ನೇತ್ರ, ಶಾಲೆಯಲ್ಲಿ
ನೇತ್ರ, ನಿಮ್ಮಮ್ಮ ನಮ್ಮ ಮನೆ ಕಡೆ ಬರಲೇ ಇಲ್ಲ? ಮೀನು ಮಾರಕ್ಕೆ ಇನ್ನು ಹೋಗ್ತಾ ಇಲ್ವಾ? ಹಿಂಗೇ ಇದ್ದರೇ ಜೀವನ ಹೆಂಗೆ?
ಟೀಚರ್, ನಮ್ಮಮ್ಮ ಯಾವಾಗ್ಲೂ ಅಳ್ತಾನೆ ಇರ್ತಾರೆ. ಆವತ್ತು ಸಂವಿಧಾನದ ಪಾಠ ಮಾಡಿದಾಗ ಹೇಳಿದ್ರಲ್ಲ, ಕಾನೂನು, ನ್ಯಾಯದ ಬಗ್ಗೆ? ಅದೆಲ್ಲ ಹೇಳಿ ಧೈರ್ಯವಾಗಿ ಇರಕ್ಕೆ ಹೇಳ್ತಾನೆ ಇದ್ದೀನಿ. ಆದರೆ ಅವರು ಧೈರ್ಯ ತಗೊಂತಿಲ್ಲ. ಟೀಚರ್, ಪ್ಲೀಸ್ ನಮ್ಮ ಮನೆಗೆ ಬರ್ತೀರಾ? ನಮ್ಮ ಅಮ್ಮನಿಗೆ ಸ್ವಲ್ಪ ಧೈರ್ಯ ಹೇಳ್ತೀರಾ?


ನೇತ್ರಳ ಟೀಚರ್ ಅವಳ ಮನೆಗೆ ಬರುತ್ತಾರೆ.
ಸರೋಜ, ಹೀಗೆ ಮೂಲೆಲಿ ಕೂತ್ಕೊಂಡ್ರೆ ಹೇಗೆ? ನಮ್ ಜಾತಿಯವರಿಗೆ ಇದೇನು ಹೊಸದಾ? ನೀನೇ ಧೈರ್ಯ ಕಳೆದುಕೊಂಡರೆ, ಮಕ್ಕಳ ಗತಿ ಏನು? ಒಂದು ಪೊಲೀಸ್ ಕಂಪ್ಲೇಂಟ್ ಕೊಡಬಾರದೇ?
ಮೇಡಂ ಅವರೆ, ಒಂದು ಹೊತ್ತು ಊಟಕ್ಕೂ ಕಷ್ಟ ಆಗ್ತಿರೋ ನನಗೆ , ಪೊಲೀಸ್ , ಕೋರ್ಟು ಅಂತ ಅಲಿಯೋಕ್ಕಾಗುತ್ತಾ? ನನ್ನ ಮಕ್ಕಳಿಗೆ ಒಂದು ದಾರಿ ಆದ್ರೆ ನನಗೆ ಅಷ್ಟೇ ಸಾಕು.
ಮೇಲ್ಜಾತಿ ಮಕ್ಕಳಿಗೆ ನಾನು ಪಾಠ ಮಾಡ್ತೀನಿ ಅಂತ ನನಗೆ ಎಷ್ಟು ತೊಂದರೆ ಕೊಟ್ಟರು. ನಾನು ಕೆಲಸ ಬಿಡಬೇಕೇನೋ ಅನ್ನುವಷ್ಟು ಆಗಿತ್ತು. ಮಕ್ಕಳ ಪ್ರೀತಿ ನೋಡಿ ಧೈರ್ಯ ಮಾಡಿಕೊಂಡೆ. ಕಾನೂನು ನನ್ನ ಪರ ಇದೆ, ಅದಕ್ಕೆ ನನ್ನ ಕೆಲಸ ಉಳಿಸಿಕೊಂಡೆ.



ಸರೋಜ ನಿನಗಾಗಿರುವ ಅನ್ಯಾಯ, ನಮ್ಮ ದೇಶದಲ್ಲಿ ದಿನನಿತ್ಯ ಪರಿಶಿಷ್ಟ ಜಾತಿ ಹಾಗು ಪಂಗಡಗಳಿಗೆ ಗಳಿಗೆ ಸೇರಿರುವ ಅನೇಕರಿಗೆ ಆಗುತ್ತಿದೆ. ಸರ್ಕಾರದ ಅಂಕಿ-ಅಂಶಗಳ ಪ್ರಕಾರ.

- ಪ್ರತಿ ದಿನ ಇಬ್ಬರು ಎಸ್ ಸಿ / ಎಸ್ ಟಿ ಸಮುದಾಯದವರ ಕೊಲೆಯಾಗುತ್ತದೆ.
- ಪ್ರತಿ ನಾಲ್ಕು ಘಂಟೆ ಗೆ ಒಮ್ಮೆ ಎಸ್ ಸಿ / ಎಸ್ ಟಿ ಸಮುದಾಯದ ಒಬ್ಬ ಮಹಿಳೆಯ ಮೇಲೆ ಅತ್ಯಾಚಾರ ನಡೆಯುತ್ತದೆ.
- ಪ್ರತಿ ಎರಡು ಗಂಟೆಗೆ ಎಸ್ ಸಿ / ಎಸ್ ಟಿ ಸಮುದಾಯದ ಒಬ್ಬ ಪ್ರಜೆಯ ಮೇಲೆ ಹಲ್ಲೆ ಆಗುತ್ತದೆ.
- ಪ್ರತಿ ತಿಂಗಳು 18 ಎಸ್ ಸಿ / ಎಸ್ ಟಿ ಸಮುದಾಯದವರ ಮನೆ ಅಥವಾ ಆಸ್ತಿಯನ್ನು ಸುಟ್ಟು ಹಾಕಲಾಗುತ್ತಿದೆ.
- ಪ್ರತಿ ವಾರವೂ 11 ಜನ ಎಸ್ ಸಿ / ಎಸ್ ಟಿ ಸಮುದಾಯದವರನ್ನು ಅಪಹರಣ ಮಾಡಲಾಗುತ್ತಿದೆ.

ಇಂತಹ ಪ್ರಕರಣಗಳನ್ನು ತಡೆಯುವ ನಿಟ್ಟಿನಲ್ಲೇ ಎಸ್ ಸಿ / ಎಸ್ ಟಿ ಕಾಯ್ದೆ (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆಗಟ್ಟುವ) ಕಾಯ್ದೆ 1989) ಜಾರಿಯಾಗಿದೆ.


ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿರುವ ವ್ಯಕ್ತಿಯ ಮೇಲೆ ಯಾರೇ ದೌರ್ಜನ್ಯ ಎಸಗಿದರೂ ಈ ಕಾನೂನು ಅಡಿಯಲ್ಲಿ ಕೂಡಲೇ ಬಂಧಿಸಲಾಗುವುದು. ಲೈಂಗಿಕ ದೌರ್ಜನ್ಯ, ಆಸ್ತಿ ಹಾನಿ, ಕೊಲೆ, ದರೋಡೆ, ಜಾತಿ ನಿಂದನೆ ಇಂತಹ ಯಾವುದೇ ಅಪರಾಧವಾದರೂ, ಈ ಕಾಯ್ದೆ ನಮ್ಮ ನೆರವಿಗಿದೆ.

Community Health Library and Information Centre
SOCHARA


ದೂರು ದಾಖಲಾದ ಕೂಡಲೇ, ಸಂತ್ರಸ್ಥ ಕುಟುಂಬದ ನಿತ್ಯ ಜೀವನಕ್ಕೆ ಆಧಾರವೆಂದು ಧನ ಸಹಾಯ ಮತ್ತಿತ್ತರ ಸಹಕಾರಗಳನ್ನು ಸರ್ಕಾರದಿಂದಲೇ ಕೊಡಲಾಗುತ್ತದೆ. ಹಾಗಾಗಿ ಆ ಕುಟುಂಬದ ಸದಸ್ಯರು ಬೇರೆ ಯಾರ ಬಳಿಯೂ ಕೈಚಾಚದೆ ಧೈರ್ಯವಾಗಿರಬಹುದು. ಅಷ್ಟೇ ಅಲ್ಲದೆ, ದೂರು ದಾಖಲಿಸುವ ಕುಟುಂಬಕ್ಕೆ ದಿನದ ಇಪತ್ತು ನಾಲಕ್ಕು ಘಂಟೆಯು ಪೊಲೀಸ್ ರಕ್ಷಣೆ ನೀಡಲಾಗುವುದು.


ಈ ಕಾಯ್ದೆ ರೂಪಗೊಂಡಿರುವುದೇ ಪರಿಶಿಷ್ಟ ಜಾತಿ ಹಾಗು ಪರಿಶಿಷ್ಟ ಪಂಗಡದ ಜನಗಳು ಸಮಾನತೆಯಿಂದ, ಘನತೆಯಿಂದ ಇರಲು; ಅವರು ತಮ್ಮ ಹಕ್ಕುಗಳನ್ನು ಯಾವುದೇ ಹಿಂಜರಿಕೆಯಿಲ್ಲದೆ ಚಲಾಯಿಸುವಂತೆ ಸಾಧ್ಯಮಾಡಲು. RHR-100

ಈ ಕಾಯ್ದೆಯ ಸಹಾಯದಿಂದ ನಿನ್ನ ಗಂಡನ ಕೊಲೆಗೆ, ನಿನ್ನ ಕುಟುಂಬಕ್ಕೆ ಆದ ಅನ್ಯಾಯಕ್ಕೆ ನ್ಯಾಯ ದೊರಕಿಸಬಹುದು.




ನಮಗೆ ಇದೆಲ್ಲ ಗೊತ್ತೇ ಇರಲಿಲ್ಲ. ಕಾನೂನು ನಮ್ಮ ಪರ ಇರೋದಾದರೆ ನಾವ್ಯಾಕೆ ಹೀಗೆ ಎಲ್ಲವನ್ನು ಸಹಿಸಿಕೊಂಡಿರಬೇಕು?


ಮರುದಿನ ಸರೋಜಾ ಪೊಲೀಸ್ ಠಾಣೆಗೆ ಹೋಗುತ್ತಾರೆ.
ನಮಸ್ಕಾರ ಸರ್. ನಾನು ಎಸ್ ಸಿ / ಎಸ್ ಟಿ ಕಾಯ್ದೆಯಡಿ ದೂರ ಕೊಡಲು ಬಂದಿದ್ದೇನೆ.
ಸರ್ಕಾರ ಹೊರಡಿಸಿದ್ದ ಟೆಂಡರ್ ಗೆ ನನ್ನ ಗಂಡ ಅರ್ಜಿ ಹಾಕಿದ್ದರು. ಅದನ್ನು ಹಿಂಪಡೆಯುವಂತೆ ಮೇಲ್ಜಾತಿಯ ಶಿವರಾಮಯ್ಯ ಮತ್ತು ಅವರ ಸ್ನೇಹಿತರಾದ ರಮೇಶ್ ಮತ್ತು ನಿಂಗಪ್ಪ ಒತ್ತಾಯ ಮಾಡ್ತಿದ್ದರು. ನನ್ನ ಗಂಡ ಅರ್ಜಿಯನ್ನು ಹಿಂಪಡೆಯದ ಕಾರಣ, ಅವರನ್ನು ಅವರನ್ನ ಸಾಯೋಹಾಗೆ ಹೊಡೆದಿದ್ದಾರೆ.
ಸರೋಜ ಅನಕ್ಷರಸ್ತೆಯಾಗಿದ್ದರಿಂದ ಪೊಲಿಸ್ ಅಧಿಕಾರಿಯು, ತನ್ನ ಕರ್ತವ್ಯದ ಅಡಿಯಲ್ಲಿ ದೂರನ್ನು ಬರೆದು ಅದನ್ನು ಗಟ್ಟಿಯಾಗಿ ಓದಿ ತಿಳಿಸುತ್ತಾರೆ. ಆಕೆ ಎಲ್ಲವನ್ನು ಒಪ್ಪಿದನಂತರ ಸಹಿ ಮಾಡುತ್ತಾಳೆ.




ಮಾರನೆಯ ದಿವಸ ಸರೋಜ ಎಂದಿನಂತೆ ಮೀನು ಮಾರಲು ಹೋದಾಗ ಶಿವರಾಮಯ್ಯನ ಜೊತೆಗಾರ ರಮೇಶ್ ಅಡ್ಡಹಾಕುತ್ತಾನೆ.
ಏನು? ಪೊಲೀಸರಿಗೆ ದೂರು ಕೊಟ್ಟಿದ್ದೀಯಂತೆ. ನನಗೆ ಅರ್ಥ ಆಗುತ್ತೆ, ನಿನಗೆ ಎಷ್ಟು ಕಷ್ಟಆಗಿದೆ ಅಂತ. ಪಾಪ ದುಃಖದಲ್ಲಿದ್ದೀರಾ. ಏನಾದರೂ ಸಹಾಯ ಮಾಡೋಣ ಅಂತ ಬಂದೆ.
ತಗೋ ಈ ದುಡ್ಡು. ಮಕ್ಕಳು ಮರಿ ಇರುವವಳು. ಇಟ್ಕೋ. ಇನ್ನು ಹೆಚ್ಚು ಬೇಕಾದರೆ ಕೇಳು. ಕೊಡ್ತೀನಿ.
ನರಿ, ಮೊಲಕ್ಕೆ ಸಹಾಯ ಮಾಡಿದಂಗಾಯ್ತು. ನಿಮ್ಮ ದುಡ್ಡು ನೀವೇ ಇಟ್ಕೊಳ್ಳಿ, ಪೊಲೀಸರು, ಕಾನೂನು, ಸರ್ಕಾರ ನನ್ನ ಪಾಲಿಗೆ ನ್ಯಾಯ ಕೊಡುತ್ತೆ ಅಂತ ನಂಬಿದ್ದೀನಿ.
ಏನೋ ಅಯ್ಯೋ ಪಾಪ ಅಂದ್ರೆ, ದುರಹಂಕಾರ ನೋಡು ಇವಳಿಗೆ! ಈ ಕೆಳ ಜಾತಿಯವಳಿಗೂ ನ್ಯಾಯ ಬೇಕಂತೆ. ನಿಮ್ಮ ಪಾಲಿಗೆ ಯಾರು ಇಲ್ಲ, ತಿಳ್ಕೊ. ದಿಮಾಕ್ ತೋರಿಸಿದರೆ ನಿನ್ನ ಗಂಡನಿಗೆ ಆದ ಗತಿನೇ ನಿನಗೂ ಆಗುತ್ತದೆ.
ನಿಮ್ಮ ಬೆದರಿಕೆಗೆಲ್ಲಾ ಹೆದರುವವಳಲ್ಲ ನಾನು. ಕಾಯ್ದೆ, ಕಾನೂನು ನಮ್ಮ ಪರ ಇದೆ. ತೊಲಗು ಇಲ್ಲಿಂದ.



ಸರೋಜ ದೂರು ಕೊಟ್ಟ ಕೆಲವು ದಿನಗಳ ನಂತರ, ಆಕೆ ಮನೆ ಮುಂದೆ ಸರ್ಕಾರದ ಗಾಡಿಯೊಂದು ಬಂದು ನಿಂತು ಕೆಲವು ಅಧಿಕಾರಿಗಳು ಅವಳನ್ನು ಮಾತನಾಡಿಸಲು ಬರ್ತಾರೆ.
ನಾವು ಸಮಾಜ ಕಲ್ಯಾಣ ಇಲಾಖೆಯಿಂದ ಬಂದಿದ್ದೀವಿ. ನೀವು ದೂರು ಕೊಟ್ಟಿದ್ದು ತಿಳಿಯಿತು. ನಿಮ್ಮ ಸಹಾಯಕ್ಕೆ ಬಂದಿದ್ದೀವಿ.
ನೀವು ಕಾನೂನು ಮೇಲೆ ಭರವಸೆ ಇಟ್ಟಿದಕ್ಕೆ ಧನ್ಯವಾದಗಳು. ಶಿವರಾಮಯ್ಯ ಮತ್ತು ಅವನ ಸ್ನೇಹಿತರನ್ನು ಬಂಧಿಸುತ್ತೇವೆ. ನಿಮಗೂ ನಿಮ್ಮ ಕುಟುಂಬಕ್ಕೂ ರಕ್ಷಣೆ ಒದಗಿಸುತ್ತೇವೆ.
ಓಹೋ! ತುಂಬಾ ಒಳ್ಳೆಯದು. ನನ್ನ ದೂರು ಕಸದ ಬುಟ್ಟಿ ಸೇರುತ್ತೆ ಎಂದು ಅಂದುಕೊಂಡಿದ್ದೆ. ನೀವು ಇಷ್ಟ ಬೇಗ ಸ್ಪಂದಿಸ್ತಿರೋದು ನೋಡಿ ತುಂಬ ಖುಷಿಯಾಯ್ತು.
ಇಲ್ಲ ಸರೋಜಮ್ಮ. ತಡ ಮಾಡುವ ಮಾತೆ ಇಲ್ಲ. ಈ ನಿಮ್ಮ ನಿರ್ಧಾರ ತುಂಬಾ ಒಳ್ಳೆಯದು. ನಿಮ್ಮ ಕುಟುಂಬ ನಿರ್ವಹಣೆಗಾಗಿ ನಾವು ಧನ ಸಹಾಯವನ್ನು ಮಾಡುತ್ತೇವೆ.


ಪೊಲೀಸರು ಅಪರಾಧದ ಸ್ಥಳಕ್ಕೆ ಹೋಗಿ ಪುರಾವೆಗಳನ್ನು (ಎವಿಡೆನ್ಸ್) ಕಲೆ ಹಾಕಿದ್ದಾರೆ. ಇದನ್ನು 'ಸ್ಥಳದ ಮಹಜರ್' ಎಂದು ಕರೆಯಲಾಗುತ್ತದೆ.


ಪೊಲೀಸರು ಸರೋಜಾ ಕೊಟ್ಟಿರುವ ದೂರಿನ ಆಧಾರದ ಮೇಲೆ ಸಾಕ್ಷಿದಾರರ ಹೇಳಿಕೆಯನ್ನು ಪಡೆಯುತ್ತಾರೆ.
ಹೌದು ಸಾರ್. ಶಿವರಾಮಯ್ಯನ ಕಡೆಯವರು ಆಂಜನಪ್ಪನವರನ್ನು ಕರೆದುಕೊಂಡು ಹೋಗಿ ಹೊಡೆಯುತ್ತಿದ್ದುದ್ದನ್ನು ನಾವು ನೋಡಿದ್ವಿ ಸರ್.


ಎಸ್ ಸಿ / ಎಸ್ ಟಿ ಕಾಯ್ದೆ ಪ್ರಕಾರ ದೂರಿನಲ್ಲಿ ಹೆಸರಿಸಿರುವ ವ್ಯಕ್ತಿಗಳನ್ನು ಪೊಲೀಸರು ಕೂಡಲೇ ಬಂಧಿಸಿ ಶೀಘ್ರವಾಗಿ ವಿಶೇಷ ನ್ಯಾಯಾಲಯದಲ್ಲಿ ಹಾಜರು ಪಡಿಸಬೇಕು.


ಪ್ರಕರಣದ ವಿಚಾರಣೆ ಮುಗಿದ ನಂತರ - ವಿಶೇಷ ನ್ಯಾಯಾಲಯದಲ್ಲಿ
ಜಾತಿ ದೊಡ್ಡಸ್ತಿಕೆ ಮಾಡ್ತೀರಾ? ಎಲ್ಲರದ್ದೂ ಕೆಂಪು ರಕ್ತ ಎನ್ನುವ ತಿಳುವಳಿಕೆಯಿಲ್ಲವೇ ನಿಮಗೆ? ನೀವು ಮಾಡಿರುವ ಅಪರಾಧ ಎಷ್ಟು ಘೋರವಾದುದ್ದು ಗೊತ್ತಿದೆಯೇ?
ಮೇಲ್ಜಾತಿಯವರು ಏನು ಮಾಡಿದರು ತಪ್ಪಿಸಿಕೊಳ್ಳಬಹುದು ಎನ್ನೋದೆಲ್ಲ ಈಗ ನಡಿಯಲ್ಲ. ನಿಮ್ಮ ಮೂವರರಿಗೂ ತಲಾ ಹತ್ತು ವರ್ಷ ಜೈಲು ಶಿಕ್ಷೆ ಮತ್ತು ಇಪತ್ತೈದು ಸಾವಿರ ದಂಡ ವಿಧಿಸಲಾಗಿದೆ.
ಸರೋಜ ಅವರೇ, ಕಾನೂನಿನಲ್ಲಿ ನಂಬಿಕೆ ಇಟ್ಟಿದಕ್ಕೆ ಧನ್ಯವಾದಗಳು. ನಿಮ್ಮ ಈ ನಡೆ ಎಲ್ಲ ದಲಿತರಿಗೂ ದಾರಿಯಾಗಲಿ. ಎಸ್ ಸಿ /ಎಸ್ ಟಿ ಕಾಯ್ದೆಯಿಂದ ಇನ್ನು ಹೆಚ್ಚು ಜನರಿಗೆ ನ್ಯಾಯ ಸಿಗುವ ಹಾಗೆ ಆಗಲಿ.


ದಲಿತರಿಗೆ ನ್ಯಾಯ ಎನ್ನುವ ಈ ಸಸಿಗೆ ನಾನು ಒಂದು ಸಣ್ಣ ಬೇರು.
ಮಾನವೀಯತೆಗೆ ಮಿಡಿಯುವ ಎಲ್ಲಾ ಮನಸ್ಸುಗಳು ಸೇರಿ ಈ ಸಸಿಯನ್ನು
ನ್ಯಾಯದ ಹೆಮ್ಮರವಾಗಿಸಬೇಕು. ಇದರ ನೆರಳಿನಲ್ಲಿ ಸಾವಿರಾರು ಬದುಕುಗಳು
ನೆಮ್ಮದಿಯಾಗಿ ಉಸಿರಾಡಬೇಕು.
ಜೈ ಭೀಮ್!

# ಪರಿಶಿಷ್ಟ ಜಾತಿಗಳು (ಎಸ್.ಸಿ) ಮತ್ತು ಪರಿಶಿಷ್ಟ ಪಂಗಡಗಳ (ಎಸ್.ಟಿ) ದೌರ್ಜನ್ಯ (ತಡೆ) ಕಾಯಿದೆಯನ್ನು ಉಪಯೋಗಿಸುವುದು ಹೇಗೆ

**ಮೂರು ಭಿತ್ತಪತ್ರಗಳು ಹಾಗು ಕೈಪಿಡಿಗಳು ಈ ವೆಬ್ ಸೈಟ್ ನಲ್ಲಿ ಲಭ್ಯವಿದೆ ಈ ವೆಬ್ ಸೈಟ್ ನಲ್ಲಿ ಲಭ್ಯವಿದೆ www.altlawforum.org**

ಪರಿಶಿಷ್ಟ ಜಾತಿಗಳು ಹಾಗೂ ಪರಿಶಿಷ್ಟ ಪಂಗಡಗಳ ಸಮುದಾಯಗಳನ್ನು ರಕ್ಷಿಸುವ ಕಾನೂನುಗಳಲ್ಲಿ ಇದು ಅತ್ಯಂತ ಪ್ರಮುಖ ಕಾನೂನಾಗಿದೆ. ತಮ್ಮ ಜಾತಿಗಳ ಆಧಾರದ ಮೇಲೆ ದೌರ್ಜನ್ಯಗಳು ನಡೆಯುವುದು ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಜೀವಂತ ಅನುಭವವಾಗಿದೆ. ಹಾಗಾಗಿ ಈ ಕಾಯ್ದೆ ಬಗ್ಗೆ ಅರಿವು ಮೂಡಿಸುವುದು ಬಹಳ ಮುಖ್ಯ . ಇದು ಮೂರು ಜತೆ ಭಿತ್ತಿಪತ್ರಗಳ ಕಟ್ಟಾಗಿದ್ದು, ಇವುಗಳು ಕನ್ನಡ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಲಭ್ಯವಿವೆ. ಇವುಗಳ ಉದ್ದೇಶ ಜಾತಿ ದೌರ್ಜನ್ಯದಂತಹ ಘಟನೆಗಳ ಕುರಿತು ಜಾಗೃತಿಯನ್ನು ಮೂಡಿಸಿ, ಅವುಗಳನ್ನು ವರದಿ ಮಾಡಿ, ನ್ಯಾಯವನ್ನು ಪಡೆಯುವ ನಿಟ್ಟಿನಲ್ಲಿ ಹೋರಾಡುವುದಾಗಿದೆ. ಈ ಮಾಹಿತಿಯನ್ನು ಹೆಚ್ಚು ಜನರಿಗೆ ತಲುಪಿಸುವ ಸಲುವಾಗಿ, ನಿಮ್ಮ ಕಾರ್ಯವ್ಯಾಪ್ತಿಗಳಲ್ಲಿ ಇದನ್ನು ಅಳವಡಿಸಿಕೊಳ್ಳಬೇಕೆಂದು ಅಥವಾ ಡೌನ್'ಲೋಡ್ ಮಾಡಿಕೊಂಡು ನಿಮ್ಮ ಸಂಸ್ಥೆ-ಸಂಘಟನೆಗಳಲ್ಲಿ ಹಂಚಿಕೊಳ್ಳಬೇಕೆಂದು ವಿನಂತಿಸಿಕೊಳ್ಳುತ್ತೇವೆ.







